ಶ್ರೀ ಎಲ್.ವಿ. ರವಿಸುಬ್ರಮಣ್ಯ : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಜಾಗದ ಅವಶ್ಯಕತೆ ಬಹಳ ಕಡಿಮೆ, ಹಾಲಿ ಇರುವಂಥ ಜಾಗಗಳಲ್ಲಿ ಪಾರ್ಕ್ ಮಾಡಿ ಜನರಿಂದ ಬೇಡಿಕೆ ಬಂದಿದೆ. ಈಗ ಅಲ್ಲಿ ಒಂದು ಕಾಲೇಜಿನ ಕಟ್ಟಡ ಪ್ರಾರಂಭ ಮಾಡದಿದ್ದರೆ ಮುಂದಿನ ದಿನಗಳಲ್ಲಿ ನಮಗೆ ಜಾಗ ಸಿಗುವುದಿಲ್ಲ. ಆದ್ದರಿಂದ, ಕಾಲೇಜು ಪ್ರಾರಂಭ ಮಾಡುವುದರ ಬಗ್ಗೆ ಮಾನ್ಯ ಸಚಿವರು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನದೊಂದು ಉಪ ಪ್ರಶ್ನೆ ಏನೆಂದರೆ, ಕತ್ತರಿಗುಪ್ಪೆ ಮತ್ತು ಶ್ರೀನಗರ ಸರ್ಕಾರಿ ಶಾಲೆಯಲ್ಲಿ 9 ಮತ್ತು 10ನೇ ತರಗತಿಗೆ ಪರ್ಮಿಷನ್ ಕೇಳಿದ್ದೇನೆ. 37 ವಿದ್ಯಾರ್ಥಿಗಳು ಮಾತ್ರ ಕತ್ತರಿಗುಪ್ಪೆಯಲ್ಲಿ ಮತ್ತು 61 ವಿದ್ಯಾರ್ಥಿಗಳು ಶ್ರೀನಗರದ ಸರ್ಕಾರಿ ಶಾಲೆಯಲ್ಲಿದ್ದಾರೆಂದು ಉತ್ತರದಲ್ಲಿ ಹೇಳಿದ್ದೀರಿ. ಕತ್ತರಿಗುಪ್ಪೆಯಲ್ಲಿ ಶಾಲೆಯಲ್ಲಿದ್ದಂಥ ಸುಮಾರು 100 ಕ್ಕಿಂಥ ಹೆಚ್ಚು ವಿದ್ಯಾರ್ಥಿಗಳಿಗೆ ಹೈಸ್ಕೂಲಿನ 9 ಮತ್ತು 10ನೇ ತರಗತಿಗಳಿಗೆ ಬೇರೆ ಶಾಲೆಗಳಲ್ಲಿ ಸೀಟ್ ಸಿಗದೆ ಇರುವುದರಿಂದ ಅಲ್ಲಿನ ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಆದ್ದರಿಂದ, ತಾವು ಅಲ್ಲಿ 9 ಮತ್ತು 10ನೇ ತರಗತಿಯನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಟ್ಟರೆ ಖಂಡಿತವಾಗಿಯೂ ಕೂಡ ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗುತ್ತದೆ. ಶ್ರೀನಗರದಲ್ಲಿ ಶಾಲೆಯನ್ನು ಪ್ರಾರಂಭ ಮಾಡುವುದಕ್ಕೆ ಬೇಕಾಗಿರುವಂಥ ಕೊಠಡಿಗಳು ಮತ್ತೆ ಇತರೇ ಮೂಲಭೂತ ಸೌಕರ್ಯಗಳಿಲ್ಲ. ಆದ್ದರಿಂದ, ಮುಂದಿನ ಶೈಕ್ಷಣಿಕ ವರ್ಷದಿಂದ ದಯವಿಟ್ಟು 9 ಮತ್ತು 10ನೇ ತರಗತಿಗೆ ಅವಕಾಶ ಮಾಡಿಕೊಡಬೇಕೆಂದು ನನ್ನ ಮನವಿಯಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ವಿಜ್ಞಾನ ವಿಭಾಗವನ್ನು ಬಸವನಗುಡಿ ಕ್ಷೇತ್ರದಲ್ಲಿ ಪ್ರಾರಂಭಿಸುವುದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಮತ್ತೆ ಮಾನ್ಯ ಸದಸ್ಯರು ಹೇಳಿದಂತೆ ಶ್ರೀನಗರದಲ್ಲಿ ಮೂಲಭೂತ ಸೌಕರ್ಯಗಳಿರುವುದರಿಂದ ಅಲ್ಲಿನ ಪ್ರಾಥಮಿಕ ಶಾಲೆಯನ್ನು ಉನ್ನತೀಕರಿಸಬೇಕೆಂಬ ಅವರ ಬೇಡಿಕೆಯನ್ನು ನಾವು ಸಕಾರಾತ್ಮಕವಾಗಿ ಪರಿಶೀಲಿಸುತ್ತೇವೆ.

ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆ

30 (323) ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ):– ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆಯ ಉದ್ದೇಶವು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಸ್ಥಾಪಿಸಲಾಗುವುದು?

ಆ) ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆಯ ಕುರಿತು ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಬರೆದಿರುವ ಪತ್ರಕ್ಕೆ ಕೇಂದ್ರ ಸರ್ಕಾರದಿಂದ ಪ್ರತ್ಯುತ್ತರವೇನಾದರೂ ಬಂದಿದೆಯೇ :ಇಲ್ಲವಾದಲ್ಲಿ, ಯಾವ ಕ್ರಮವನ್ನು ಅನುಸರಿಸಲಾಗಿದೆ?

ಶ್ರೀ ವಿ.ಎಸ್. ಆಚಾರ್ಯ (ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು):–

ಅ) ಕರ್ನಾಟಕದಲ್ಲಿ ಐ.ಐ.ಟಿ ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಯಿದೆ. ಆದರೆ ಯಾವ ಸ್ಥಳದಲ್ಲಿ ಸ್ಥಾಪಿಸಬೇಕೆಂಬ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ.

ಆ) ಮಾನ್ಯ ಮುಖ್ಯ ಮಂತ್ರಿಯವರ ಪತ್ರಕ್ಕೆ ಉತ್ತರವಾಗಿ, ಮಾನ್ಯ ಪ್ರಧಾನ ಮಂತ್ರಿಯವರು ಸದರಿ ಪತ್ರವನ್ನು ಸ್ವೀಕರಿಸಲಾಗಿದೆ ಎಂದು ತಿಳಿಸಿರುವರು.

ಶ್ರೀ ಅಭಯ್ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆ ಬಗ್ಗೆ ಸುಮಾರು 127 ಜನ ಶಾಸಕರು ಸಹಿ ಮಾಡಿ ಮಾನ್ಯ ಪ್ರಧಾನ ಮಂತ್ರಿಯವರಿಗೆ ಆಗ್ರಹ ಮಾಡಿದ್ದೆವು. ಅದರ ಜೊತೆಗೆ ಹಿಂದಿನ ಮುಖ್ಯ ಮಂತ್ರಿಯಾಗಿದ್ದಂಥ ಮಾನ್ಯ ಯಡಿಯೂರಪ್ಪನವರಿಗೂ ಸಹ ಆಗ್ರಹ ಮಾಡಿದ್ದೆವು. ನಾವು ಹಿಂದಿನ ಮುಖ್ಯಮಂತ್ರಿಯವರನ್ನು ಭೇಟಿಯಾದ ನಂತರ ಕೇಂದ್ರ ಸರ್ಕಾರಕ್ಕೆ ಒಂದು ಪತ್ರ ಬರೆದು ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆಗೆ ರಾಜ್ಯ ಸರ್ಕಾರ ಸಂಪೂರ್ಣ ಸಹಕಾರ ಕೊಡುತ್ತದೆಂದು ಹೇಳಿದ್ದರು. ಆದರೆ, ಎಲ್ಲಿ ಸ್ಥಾಪನೆಯಾಗಬೇಕೆಂಬ ನಿರ್ಣಯ ಇನ್ನು ರಾಜ್ಯ ಸರ್ಕಾರದಿಂದ ಆಗಿಲ್ಲವೆಂದು ಇವತ್ತಿನ ಉತ್ತರದಲ್ಲಿ ಹೇಳಿದ್ದಾರೆ. ಆದ್ದರಿಂದ, ಹಿಂದಿನ ಮುಖ್ಯ ಮಂತ್ರಿಯವರು ಬರೆದಂಥ ಪತ್ರದ ಅಡಿಯಲ್ಲಿ ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆ ಮಾಡಬೇಕೆಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಆ) **ಡಾ: ವಿ.ಎಸ್.ಆಚಾರ್ಯ:–** ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ Indian Institute of Technology and Indian Institute of Management ಇತ್ಯಾದಿಗಳು ಆಗಬೇಕೆಂಬ ದೃಷ್ಟಿಯಿಂದ 2006ನೇ ಇಸವಿಯಿಂದ ಇಲ್ಲಿಯವರೆಗೆ ಸುಮಾರು 9 ಬಾರಿ ಮಾನ್ಯ ಪ್ರಧಾನ ಮಂತ್ರಿಯವರನ್ನು ಮತ್ತು ಕೇಂದ್ರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಿಗೆ

ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷರಿಗೆ ಪತ್ರವನ್ನು ಮತ್ತು ಮುಖತ: ಭೇಟಿಯಾಗಿ ನಾವು ಮಾತನಾಡಿದ್ದೇವೆ. ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ಗುಲ್ಬರ್ಗಾದಲ್ಲಿ ಕರ್ನಾಟಕ ಕೇಂದ್ರ ವಿಶ್ವವಿದ್ಯಾಲಯದ ಉದ್ಘಾಟನೆಗೆ ಬಂದಾಗ ನಾನು ಅವರ ಹತ್ತಿರ ಮತ್ತೊಮ್ಮೆ ವೈಯಕ್ತಿಕವಾಗಿ ಮಾತನಾಡಿದ್ದೆ. ಕಾರ್ಯಕ್ರಮದ ನಂತರ ಅವರು ಒಂದು ಪತ್ರಿಕಾ ಸಂದರ್ಶನದಲ್ಲಿ ಕರ್ನಾಟಕಕ್ಕೆ ಒಂದು ಐ.ಐ.ಟಿ. ಅಥವಾ ಐ.ಎ.ಎಂ. ಅನ್ನು ಕೊಡುವಂಥ ವಿಚಾರ ಇದೆ. 12ನೇ ಯೋಜನಾವಧಿಯಲ್ಲಿ ಕೊಡಲಾಗುವುದೆಂಬ ಒಂದು ಮುನ್ಸೂಚನೆಯನ್ನು ಕೊಟ್ಟಿದ್ದರು. ಆನಂತರ ಸುಮಾರು 100 ಕ್ಕಿಂಥ ಹೆಚ್ಚು ಜನ ಸಹಿ ಮಾಡಿ ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪಿಸಬೇಕೆಂದು ಪತ್ರ ಬರೆದಿದ್ದು ನಿಜ. ಮತ್ತೆ ಹಿಂದಿನ ಮುಖ್ಯ ಮಂತ್ರಿಯವರು ಮಾರ್ಚ್ 2010 ರಲ್ಲಿ ಬೆಳಗಾಂ ಅನ್ನು ಉಲ್ಲೇಖಿಸಿ ಬೆಳಗಾವಿಯಲ್ಲಿಯೇ ಆಗಬೇಕೆಂದು ಒಂದು ಪತ್ರ ಕೂಡ ಬರೆದಿದ್ದರು. ಇದೆಲ್ಲದಕ್ಕೂ ಸೇರಿ ಒಂದು ಉತ್ತರ ಬಂದಿದೆ. ಮಾನ್ಯ ಪ್ರಧಾನ ಮಂತ್ರಿಯವರು ಸ್ವತ: ಸಹಿ ಮಾಡಿ ಕರ್ನಾಟಕದಲ್ಲಿ ಒಂದು ಐ.ಐ.ಟಿ. ಮಾಡಬೇಕೆಂದು ತಾವೆಲ್ಲರು ಮನವಿ ಮಾಡಿಕೊಂಡಿರುವುದು ಬಂದಿದೆ. ಅದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆಂಬ ಉತ್ತರವನ್ನು ಕೊಟ್ಟಿದ್ದಾರೆ. ಬೆಳಗಾವಿ ಅಥವಾ ಎಲ್ಲಿ ಮಾಡಬೇಕೆಂಬ ಬಗ್ಗೆ ಒಂದು ಪೂರ್ವ ನಿರ್ಧಾರಕ್ಕೆ ಬಂದಿಲ್ಲ. ಬೆಳಗಾವಿಯ ಒಂದು ಜಾಗ ಮತ್ತು ಇತ್ಯಾದಿಗಳ ಬಗ್ಗೆ ನಮ್ಮ ತಯಾರಿಗಳನ್ನು ನಾವು ಮಾಡಿದ್ದೇವೆ. ಇದರ ಬಗ್ಗೆ ಪ್ರಯತ್ನವನ್ನು ಮುಂದುವರಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಆ) ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ನಗರಾಭಿವೃದ್ಧಿ ಇಲಾಖೆ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ:07–12–2011ರ 2ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 86 ಪ್ರಶ್ನೆಗಳ ಪೈಕಿ 63 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

ಅನುಬಂಧ–1

ಇ) ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು:

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ನಗರಾಭಿವೃದ್ಧಿ ಇಲಾಖೆ ಸಚಿವರು)(ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):–